‘ಹಾಲುಹಾದಿ’ಯೆಂಬ ಬ್ರಹ್ಮಾಂಡದಲ್ಲಿಯೇ (ಮಿಲ್ಕಿವೇ ಗೆಲಕ್ಸಿ) 410 ಕೋಟಿ ಸೂರ್ಯನಂಥ ನಕ್ಷತ್ರಗಳಿವೆ. ಅವುಗಳಲ್ಲಿನ ಒಂದಾದರೂ ನಕ್ಷತ್ರಕ್ಕೆ ಭೂಮಿಯಂಥ ಗ್ರಹವಿರಬಹುದಲ್ಲವೆ? ಅಲ್ಲಿ ನಮ್ಮಂಥ ಅಥವಾ ನಮಗಿಂತಲೂ ಬುದ್ಧಿವಂತ ಜೀವಿಗಳು ಇರಬಹುದಲ್ಲವೆ? ಈ ಪ್ರಶ್ನೆಗಳಿಗೆ ನಮಗಿನ್ನೂ ಸ್ಪಷ್ಟ ಉತ್ತರಗಳು ದೊರೆತಿಲ್ಲ. ಅನ್ಯಗ್ರಹ ಜೀವಿಗಳು ಇರುವುದೇ ಆದರೆ, ರೇಡಿಯೊ ದೂರದರ್ಶಕಗಳ ಮೂಲಕವಷ್ಟೇ ಅವುಗಳನ್ನು ನಾವು ಸಂಪರ್ಕಿಸಬಹುದು. ಇಂಥ ಕಾರ್ಯಕ್ಕೆಂದೇ ಚಾಲನೆಗೊಂಡ ಅಂತರರಾಷ್ಟ್ರೀಯ ಒಕ್ಕೂಟದ ಯೋಜನೆಗಳೆಂದರೆ ‘ಸರ್ಚ್ ಫಾರ್ ಎಕ್ಸ್ಟ್ರಾ ಟೆರ್ರಿಸ್ಟ್ರಿಯಲ್ ಇಂಟೆಲಿಜೆನ್ಸ್’ (ಸೆಟಿ) ಹಾಗೂ ‘ಬ್ರೇಕ್‌ಥ್ರೂ ಲಿಸನ್ ಇನಿಶಿಯೇಟಿವ್’ (ಬಿಎಲ್‌ಐ). ಸದ್ಯಕ್ಕೆ ಸುದ್ದಿ ಮಾಡಿರುವ ರೇಡಿಯೊ ಸಂಕೇತಗಳ ಗುಚ್ಛವನ್ನು ಸ್ವೀಕರಿಸಿರುವುದು ‘ಬಿಎಲ್‌ಐ’.

ಈ ಅಗಾಧ ವಿಶ್ವದಲ್ಲಿ ಹಲವಾರು ಕಾಯಗಳು ರೇಡಿಯೊ ಸಂಕೇತಗಳನ್ನು ಸದಾ ಕಾಲ ಚಿಮ್ಮುತ್ತಲೇ ಇರುತ್ತವೆ. ನಮ್ಮನ್ನು ಆವರಿಸಿರುವ ಸಹಸ್ರಾರು ಮಾನವ ನಿರ್ಮಿತ ರೇಡಿಯೊ ಸಂಕೇತಗಳ ಬಲದ ಮುಂದೆ ಈ ಅತಿ ದೂರದ ಪರ–ಕಾಯಗಳು ಹೊಮ್ಮಿಸುವ ಸ್ವಾಭಾವಿಕ ರೇಡಿಯೊ ಸಂಕೇತಗಳು ಅತ್ಯಂತ ಕ್ಷೀಣವಾಗಿರುತ್ತವೆ. ಯಾವುದಾದರೂ ಗ್ರಹ ಅಥವಾ ಆಕಾಶಕಾಯದಿಂದ ಭೂಮಿಯ ದಿಕ್ಕಿಗೇ ಗುರಿಯಿಟ್ಟು ರೇಡಿಯೊ ಸಂಕೇತಗಳನ್ನು ಯಾರಾದರೂ (ಅನ್ಯಗ್ರಹ ಜೀವಿಗಳು?) ಕಳುಹಿಸಿದರೆ ಖಗೋಳ ವಿಜ್ಞಾನಿಗಳ ದೂರದರ್ಶಕಗಳು ಅವುಗಳನ್ನು ಗುರುತಿಸಬಲ್ಲವು.

ಐನ್‌ಸ್ಟೀನ್ ನಂತರ ನಮ್ಮನ್ನು ಪ್ರಭಾವಿಸಿದ ಶ್ರೇಷ್ಠ ವಿಜ್ಞಾನಿ ಸ್ಟೀಫನ್ ಹಾಕಿಂಗ್ ಅವರಿಗೆ ಅನ್ಯಗ್ರಹಗಳಲ್ಲಿ ಜೀವಿಗಳಿರಬಹುದೆಂಬ ನಂಬಿಕೆಯಿತ್ತು. ಭವಿಷ್ಯತ್ತಿನಲ್ಲಿ ನಮ್ಮ ಈ ಭೂಮಿ ವಾಸಯೋಗ್ಯವಾಗದಿರಬಹುದು ಅಥವಾ ಅನ್ಯಗ್ರಹ ಜೀವಿಗಳ ದಾಳಿಗೆ ನಾಶವಾಗಬಹುದು. ವಾಸಯೋಗ್ಯ ಗ್ರಹಗಳನ್ನು ಗುರುತಿಸುವ ಕಾರ್ಯ ಈಗಿನಿಂದಲೇ ಆರಂಭಿಸಬೇಕೆಂದು ಅವರು ಹೇಳಿದ್ದರು. ಅವರ ಪ್ರೇರಣೆಯಿಂದ ರಷ್ಯಾದ ಶ್ರೀಮಂತ ಯೂರಿ ಮಿಲ್ನರ್ ಅವರು ಒಂದು ಕೋಟಿ ಡಾಲರ್ ನೀಡಿ ‘ಬಿಎಲ್‌ಐ’ ಅನ್ನು ಸ್ಥಾಪಿಸಿದರು. ಜಗತ್ತಿನ ಪ್ರಮುಖ ರೇಡಿಯೊ ದೂರದರ್ಶಕ ಸಂಸ್ಥೆಗಳೊಂದಿಗೆ ಈ ಸಂಸ್ಥೆಯ ಒಡಂಬಡಿಕೆಯಿದೆ. ಕೃತಕ ಸೃಷ್ಟಿಯ ರೇಡಿಯೊ ಹಾಗೂ ದ್ಯುತಿ (ಆಪ್ಟಿಕ್) ಸಂಕೇತಗಳಿಗಾಗಿ ಬಾಹ್ಯಾಕಾಶದಲ್ಲಿ ಕಳೆದ ಹತ್ತು ವರ್ಷಗಳಿಂದ ‘ಬಿಎಲ್‌ಐ’ ಹುಡುಕಾಟ ನಡೆಸುತ್ತಿದೆ. ಸ್ವೀಕೃತವಾದ ನೂರಾರು ಸಂಕೇತಗಳನ್ನು ಸಂಸ್ಕರಿಸಿ, ಅವುಗಳು ಚಿಮ್ಮಿ ಬಂದಿರಬಹುದಾದ ದಿಕ್ಕು, ಅವುಗಳ ಬಲ, ಅವುಗಳು ಕ್ರಮಿಸಿಬಂದಿರಬಹುದಾದ ದೂರಗಳನ್ನು ಅಂದಾಜು ಮಾಡುತ್ತಿದೆ. ನಮ್ಮ ಬ್ರಹ್ಮಾಂಡದ ಮಧ್ಯಭಾಗವನ್ನು ಕೇಂದ್ರೀಕರಿಸಿಕೊಂಡು ಭೂಮಿಗೆ ಸಮೀಪವಿರುವ ಒಂದು ದಶಲಕ್ಷ ನಕ್ಷತ್ರಗಳ ಚಟುವಟಿಕೆಗಳನ್ನು ಈ ಯೋಜನೆಯಲ್ಲಿ ಗಮನಿಸಲಾಗುತ್ತಿದೆ. ಹಾಗೆಯೇ ನಮಗೆ ಹತ್ತಿರವಿರುವ ನೂರು ಬ್ರಹ್ಮಾಂಡಗಳಿಂದ ಚಿಮ್ಮುವ ಸಂದೇಶಗಳನ್ನು ಗ್ರಹಿಸಲೂ ಯತ್ನಿಸುತ್ತಿದೆ. 25 ಲಕ್ಷ ಕೋಟಿ ಕಿಲೋಮೀಟರ್ ದೂರದಿಂದ ಚಿಮ್ಮಿ ಬಂದ 100 ವ್ಯಾಟ್ ಶಕ್ತಿಯ ಲೇಸರ್ ಬೆಳಕನ್ನು ಸಹಾ ಗುರುತಿಸಬಲ್ಲ ದ್ಯುತಿ ಗ್ರಹಿಕೆ ವ್ಯವಸ್ಥೆ ಇಲ್ಲಿನ ದೂರದರ್ಶಕಗಳಿಗಿದೆ. ಆಗಸದ ದಕ್ಷಿಣ ಭಾಗವನ್ನು ವೀಕ್ಷಿಸುತ್ತಿದ್ದ ಆಸ್ಟ್ರೇಲಿಯಾದ ‘ಪಾರ್ಕ್ಸ್’ ದೂರದರ್ಶಕಕ್ಕೆ 2019ರ ಏಪ್ರಿಲ್–ಮೇ ತಿಂಗಳಿನಲ್ಲಿ ವಿಶಿಷ್ಟ ರೇಡಿಯೊ ಸಂಕೇತ ಗುಚ್ಛವೊಂದು ಗ್ರಹಿಕೆಯಾಯಿತು. ಅದು ಸೌರಮಂಡಲಕ್ಕೆ ಅತಿ ಸಮೀಪದಲ್ಲಿರುವ ‘ಆಲ್ಫಾ ಸೆಂಟೌರಿ’ ತ್ರಿವಳಿ ನಕ್ಷತ್ರಗಳಲ್ಲೊಂದಾದ ‘ಪ್ರಾಕ್ಸಿಮಾ ಸೆಂಟೌರಿ’ ಕಡೆಯಿಂದಲೇ ಬಂದಿರಬಹುದೆಂಬ ಅನುಮಾನವನ್ನು ಖಗೋಳ ವಿಜ್ಞಾನಿಗಳು ವ್ಯಕ್ತಪಡಿಸಿದರು.


2019ರ ಏಪ್ರಿಲ್–ಮೇ ತಿಂಗಳಿನಲ್ಲಿ ವಿಶಿಷ್ಟ ರೇಡಿಯೊ ಸಂಕೇತಗಳನ್ನು ಗ್ರಹಿಸಿರುವ ಆಸ್ಟ್ರೇಲಿಯಾದ ‘ಪಾರ್ಕ್ಸ್’ ದೂರದರ್ಶಕ.

ನಿರ್ದಿಷ್ಟ ಅವಧಿಯ ಅಂತರದಲ್ಲಿ ನಿಯಮಿತವಾಗಿ ಪ್ರಸರಣವಾಗುತ್ತಿದ್ದ ಈ ಸಂಕೇತ ಗುಚ್ಛಕ್ಕೆ ‘ಬಿಎಲ್‌ಸಿ1’ (ಬ್ರೇಕ್‌ಥ್ರೂ ಲಿಸನ್ ಕ್ಯಾಂಡಿಡೇಟ್–1) ಎಂಬ ಹೆಸರನ್ನು ಖಗೋಳಜ್ಞರು ನೀಡಿದರು. ಈ ಗುಚ್ಛವನ್ನು ಅವರು ವಿಶ್ಲೇಷಣೆ ಮಾಡುತ್ತಿರುವಾಗ ಕೆಲವೊಂದು ಹೊಸ ಹೊಳಹುಗಳು ಗೋಚರವಾದವು. ಮೊದಲನೆಯದಾಗಿ ಆ ರೇಡಿಯೊ ತರಂಗಗಳ ಆವರ್ತನೆಯು 982 ಮೆಗಾಹರ್ಟ್ಸ್ ಆಗಿತ್ತು. ಈ ತರಂಗಾಂತರಗಳಲ್ಲಿ ಯಾವುದೇ ಮಾನವ ನಿರ್ಮಿತ ಬಾಹ್ಯಾಕಾಶ ನೌಕೆಗಳಾಗಲೀ

